ಕನ್ನಡಪ್ರಭ

# ಜೈನ ವಿದ್ಯಾರ್ಥಿಗಳಿಗೆ ವಾರಾಂತ್ಯ ಕೋರ್ಸ್

**ಮಂಗಳೂರು:** ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಲ್ಲಿ ಜೈನ ವಿದ್ಯಾರ್ಥಿಗಳಿಗೆ ವಾರಾಂತ್ಯ ಡಿಪ್ಲೊಮಾ ಕೋರ್ಸ್ ಹಮ್ಮಿಕೊಳ್ಳಲಾಗಿದೆ. ಒಂದು ವರ್ಷದಲ್ಲಿ ಎರಡು ಅವಧಿಯ ಈ ಕೋರ್ಸ್ 2014–15ನೇ ಸಾಲಿನಿಂದ ಜಾರಿಗೆ ಬರುತ್ತಿದೆ. ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಸಂಶೋಧನೆಗೆ ಅವಕಾಶವಿದೆ.



ಜೈನ ಧರ್ಮದ ಪಂಡಿತರಲ್ಲದೆ, ಡಾ. ಹಂಪ ನಾಗರಾಜಯ್ಯ, ಡಾ.ಜೀವಂಧರ ಕುಮಾರ್ ವಿದ್ಯಾರ್ಥಿಗಳಿಗೆ ಬೋಧಕ ಮಾಹಿತಿ ನೀಡಲಿದ್ದಾರೆ. ತರಗತಿ ಪಾಠವಲ್ಲದೆ, ಐತಿಹಾಸಿಕ ಸ್ಥಳಗಳಾದ ಶ್ರವಣಬೆಳಗೊಳ, ಧರ್ಮಸ್ಥಳ, ಮೂಡುಬಿದಿರೆ ಬಸದಿಗಳಿಗೆ ತೆರಳಿ ಅಧ್ಯಯನ ನಡೆಸಲು ಅವಕಾಶವಿದೆ. ಆಸಕ್ತ ವಿದ್ಯಾರ್ಥಿಗಳು ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಕಾರ್ಯಕ್ರಮ ಸಲಹೆಗಾರರಾದ ಡಾ.ರೇಖಾ ಜೈನ್(09823191667)ನ್ನು ಸಂಪರ್ಕಿಸಬಹುದು. ವೆಬ್‌ಸೈಟ್–www.jainuniversity.ac.in.